# ‘ತಲ್ಲೀನತೆಯೇ ಯಶಸ್ಸಿಗೆ ಕಾರಣ’

ಪ್ರಜಾವಾಣಿ ವಾರ್ತೆ

ಮುಡಿಪು: ‘ಯಾವುದೇ ಕಾರ್ಯದಲ್ಲಿ ತಲ್ಲೀನತೆಯೇ ಯಶಸ್ಸಿಗೆ ಕಾರಣವಾಗುತ್ತದೆ. ತಾದಾತ್ಮ್ಯ ನಿಜವಾದ ಅಧ್ಯಾತ್ಮ. ರತ್ನಾಕರ ವರ್ಣಿಯು ಭರತೇಶ ವೈಭವದಲ್ಲಿ ಈ ತತ್ವವನ್ನು ನಿರೂಪಿಸಿದ್ದಾನೆ’ ಎಂದು ವಿದ್ವಾಂಸ ಪ್ರೊ. ಬಿ.ಎ. ವಿವೇಕ ರೈ ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ ಮತ್ತು ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ‘ಭರತೇಶ ವೈಭವ ಜಿಜ್ಞಾಸೆ 2’ ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕವಿ ರತ್ನಾಕರ ವರ್ಣಿಯದ್ದು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕರಾವಳಿಯಿಂದ ಮೂಡಿ ಬಂದ ಮಹತ್ವದ ಹೆಸರು. ತೆಲುಗು, ತುಳು, ಕನ್ನಡ ಭಾಷಾ ಸಮನ್ವಯದ ಆಶಯ ಆತನ ಕೃತಿಯಲ್ಲಿ ಮೂಡಿ ಬಂದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ, ಕನ್ನಡ ಭಾಷೆ ಸಾಹಿತ್ಯವು ಗುಂಪುಗಳಾಗಿ ಒಡೆಯದೆ ಒಳಗೊಳ್ಳುವ ಸಮನ್ವಯದ ಆಶಯವನ್ನು ಹೊಂದಿದೆ. ಸಾಹಿತ್ಯದ ವಿದ್ಯಾರ್ಥಿಗಳಿಗೆ ಸಾಹಿತ್ಯವೇ ದೇವರು; ಬೇರೆ ಧರ್ಮವಿಲ್ಲ ಎಂದರು.

ಕರ್ನಾಟಕ ಜಾನಪದ ಅಕಾಡೆಮಿಯ ಜಿಶಂಪ ಜಾನಪದ ತಜ್ಞ ಪ್ರಶಸ್ತಿಗೆ ಭಾಜನರಾದ ಪ್ರೊ.ಕೆ. ಚಿನ್ನಪ್ಪ ಗೌಡ, ಕರ್ನಾಟಕ ಸರ್ಕಾರ ನೀಡುವ ಕನಕಶ್ರೀ ಪ್ರಶಸ್ತಿ ಪಡೆದ ಪ್ರೊ.ಬಿ.ಶಿವರಾಮ ಶೆಟ್ಟಿ ಅವರನ್ನು ಗೌರವಿಸಲಾಯಿತು. ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಸೋಮಣ್ಣ, ಪ್ರೊ.ನಾಗಪ್ಪ ಗೌಡ, ಧನಂಜಯ ಕುಂಬ್ಳೆ ಭಾಗವಹಿಸಿದ್ದರು.

ರತ್ನಾಕರವರ್ಣಿ ಪೀಠದ ಸಂಯೋಜಕ ಪ್ರೊ.ಸೋಮಣ್ಣ ಹೊಂಗಳ್ಳಿ ಸ್ವಾಗತಿಸಿದರು. ರತ್ನಾಕರವರ್ಣಿ ಪೀಠದ ಸಂಶೋಧನಾ ಸಹಾಯಕ ಪ್ರಸಾದ್ ವಂದಿಸಿದರು. ಯಶುಕುಮಾರ್ ನಿರೂಪಿಸಿದರು.



ಮಂಗಳೂರು ವಿಶ್ವವಿದ್ಯಾನಿಲಯದ ಮಹಾಕವಿ ರತ್ನಾಕರ ವರ್ಣಿ ಅಧ್ಯಯನ ಪೀಠ ಮತ್ತು ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಭರತೇಶ ವೈಭವ ಜಿಜ್ಞಾಸೆ–2 ಕೃತಿಯನ್ನು ಪ್ರೊ.ವಿವೇಕ ರೈ ಬಿಡುಗಡೆ ಮಾಡಿದರು

## ಹಳಿಯಲ್ಲಿ ನಾಣ್ಯ

Scanned with CamScanner

ಸಿದ್ಧಪಡಿಸಿದ 40 ಬಗೆಯ ಹಣ್ಣಿನ ಮುಂದುವರಿಯಲಿದೆ.

# 'ತಾದಾತ್ಮ್ಯವೇ ಅಧ್ಯಾತ್ಮ'



ಭರತೇಶ ವೈಭವ ಜಿಜ್ಞಾಸೆ 2 ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

**ಮಂಗಳಗಂಗೋತ್ರಿ:** ಜೀವನದಲ್ಲಿ ಯಾವುದೇ ಕ್ರಿಯೆಯಲ್ಲಿ ತೊಡಗಿಕೊಂಡಾಗ ತಲ್ಲಿನತೆಯೇ ಯಶಸ್ಸಿಗೆ ಕಾರಣವಾಗುತ್ತದೆ. ಲೌಕಿಕವಿರಲಿ ಅಲೌಕಿಕವಿರಲಿ ತಾದಾತ್ಮ್ಯವೇ ನಿಜವಾದ ಅಧ್ಯಾತ್ಮ. ರತ್ನಾಕರವರ್ಣಿ ಭರತೇಶ ವೈಭವದಲ್ಲಿ ಈ ತತ್ವವನ್ನು ನಿರೂಪಿಸಿದ್ದಾನೆ ಎಂದು ವಿದ್ವಾಂಸ ಪ್ರೊ.ಬಿ.ಎ. ವಿವೇಕ ರೈ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ ಮತ್ತು ಎಸ್ ವಿಪಿ ಕನ್ನಡ ಅಧ್ಯ ಯನ ಸಂಸ್ಥೆಯ ವತಿಯಿಂದ ಕನ್ನಡ ವಿಭಾಗದ ಸಭಾಂಗಣದಲ್ಲಿ ನಡೆದ ಭರತೇಶ ವೈಭವ ಜಿಜ್ಞಾಸೆ 2 ಕೃತಿ ಬಿಡುಗಡೆಗೊಳಿಸಿ, ಮಾತನಾಡಿದರು.

ಕವಿ ರತ್ನಾಕರವರ್ಣಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕರಾವಳಿಯಿಂದ ಮೂಡಿಬಂದ ಮಹತ್ವದ ಹೆಸರು. ತೆಲುಗು, ತುಳು, ಕನ್ನಡ ಹೀಗೆ ಭಾಷಾ ಸಮನ್ವಯದ ಆಶಯ ಆತನ ಕೃತಿಯಲ್ಲಿ ಮೂಡಿಬಂದಿದೆ ಎಂದರು.

ಮಂಗಳೂರು ವಿವಿ ಕುಲಪತಿ ಪ್ರೊ. ಪಿ. ಎಲ್. ಧರ್ಮ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಭಾಷೆ ಸಾಹಿತ್ಯ ಗುಂಪುಗಳಾಗಿ ಒಡೆಯದೆ ಒಳಗೊಳ್ಳುವ ಸಮನ್ವಯದ ಆಶಯವನ್ನು ಹೊಂದಿದೆ. ಸಾಹಿತ್ಯ ವಿದ್ಯಾರ್ಥಿಗಳಿಗೆ ಸಾಹಿತ್ಯವೇ ದೇವರು ಬೇರೆ ಧರ್ಮವಿಲ್ಲ ಎಂದರು.

ಕರ್ನಾಟಕ ಜಾನಪದ ಅಕಾಡೆಮಿಯ ಜಿಶಂಪ ಜಾನಪದ ತಜ್ಞ ಪ್ರಶಸ್ತಿಗೆ ಭಾಜನರಾದ ಪ್ರೊ.ಕೆ. ಚಿನ್ನಪ್ಪ ಗೌಡ ಹಾಗೂ ಕನಕಶ್ರೀ ಪ್ರಶಸ್ತಿ ಪಡೆದ ಪ್ರೊ.ಬಿ. ಶಿವರಾಮ ಶೆಟ್ಟಿ ಅವರನ್ನು ಗೌರವಿಸಲಾಯಿತು.

ಎಸ್‌ವಿಪಿ ಕನ್ನಡ ಅಧ್ಯಯನ ಅಧ್ಯಕ್ಷ ಡಾ. ಸೋಮಣ್ಣ ಡಾ. ನಾಗಪ್ಪ ಗೌಡ ಹಾಗೂ ಡಾ. ಧನಂಜಯ ಕುಂಬ್ಳೆ ಉಪಸ್ಥಿತರಿದ್ದರು.

ರತ್ನಾಕರವರ್ಣಿ ಪೀಠದ ಸಂಯೋಜಕ ಪ್ರೊ. ಸೋಮಣ್ಣ ಹೊಂಗಳ್ಳಿ ಸ್ವಾಗತಿಸಿದರು. ಪೀಠದ ಸಂಶೋಧನ ಸಹಾಯಕ ಪ್ರಸಾದ್ ವಂದಿಸಿದರು. ಡಾ. ಯಶುಕುಮಾರ್ ಕಾರ್ಯಕ್ರಮ ನಿರೂಪಿಸಿದರು.

Scanned with CamScanner